ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-3 Issue 4, Jan-Feb 2022, Pp 136-143.**
**©*IIMRD*, Mysuru**

IIMRD JOURNALS

**www.iimrd.com**

# ಪರಿಶಿಷ್ಟ ಜಾತಿ ಮಹಿಳೆಯರ ಶೈಕ್ಷಣಿಕ ಸ್ಥಿತಿಗತಿಗಳು: ಸಮಾಜಶಾಸ್ತ್ರೀಯ ವಿಶ್ಲೇಷಣೆ

**ಡಾ. ದೊಡ್ಡ ಹನುಮಯ್ಯ ಬಿ.ಎಚ್.**
ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

**ಸಾರಾಂಶ: (Abstract)**

*ಶಿಕ್ಷಣವು ಆಧುನಿಕ ಸಮಾಜಗಳ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾಗಿದೆ. ಸಾಮಾಜಿಕ ತರಬೇತಿ ಮತ್ತು ಸಾಂಸ್ಕೃತಿಕ ಪರಂಪರೆಯ ಮುಂದುವರಿಕೆಗೆ ಶಿಕ್ಷಣವು ಸಾಧನವಾಗಿದೆ. ಜೊತೆಗೆ ರಾಷ್ಟ್ರದ ಅಮೂಲ್ಯ ಸಂಪತ್ತಾಗಿರುವ ಮಕ್ಕಳನ್ನು ಪ್ರತಿಭಾವಂತರನ್ನಾಗಿ, ಜವಾಬ್ದಾರಿಯುತ ಪ್ರಜೆಗಳನ್ನಾಗಿ ಬೆಳೆಸುವಲ್ಲಿ ಶಿಕ್ಷಣ ಅವಶ್ಯಕವಾಗಿದೆ. ಆದರೆ ಸ್ವಾತಂತ್ರ್ಯ ಬಂದು ಏಳು ದಶಕಗಳು ಕಳೆದಿದ್ದರೂ ಕೂಡ ಎಲ್ಲಾ ಸಮುದಾಯಗಳು ಶಿಕ್ಷಣ ಪಡೆದುಕೊಳ್ಳುವಲ್ಲಿ ಸಾಧ್ಯವಾಗಿಲ್ಲ. ಧರ್ಮ ಮತ್ತು ಜಾತಿಯಾಧಾರಿತ ವ್ಯವಸ್ಥೆಯನ್ನು ಹೊಂದಿರುವ ಭಾರತೀಯ ಸಮಾಜದಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮುಂದುವರೆದ ಸಮುದಾಯಗಳು ಶೈಕ್ಷಣಿಕವಾಗಿಯೂ ಉನ್ನತ ಸ್ಥಾನದಲ್ಲಿದ್ದರೆ, ಹಿಂದುಳಿದ, ದಲಿತ, ಬುಡಕಟ್ಟು, ಅಲೆಮಾರಿ ಮತ್ತು ಅರೆ–ಅಲೆಮಾರಿ ಸಮುದಾಯಗಳು ಶೈಕ್ಷಣಿಕವಾಗಿ ತೀರ ಹಿಂದುಳಿದ್ದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪ್ರಸ್ತುತ ಲೇಖನದಲ್ಲಿ ಕರ್ನಾಟಕದಲ್ಲಿರುವ ಪರಿಶಿಷ್ಟ ಜಾತಿ ಮಹಿಳೆಯರ ಶೈಕ್ಷಣಿಕ ಸ್ಥಿತಿಗತಿಗಳು ಮತ್ತು ಶೈಕ್ಷಣಿಕವಾಗಿ ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ.*

**ಮುಖ್ಯಪದಗಳು (Keywords):** ದಲಿತ, ಪರಿಶಿಷ್ಟಜಾತಿ, ಮಹಿಳೆ, ಶಿಕ್ಷಣ, ಕರ್ನಾಟಕ.

## ಪೀಠಿಕೆ

ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ (1948) ಯಲ್ಲಿ ಅತ್ಯವಶ್ಯಕವಾದ ಆಹಾರ, ವಸತಿ ಮತ್ತು ನೀರಿನ ಜೊತೆಗೆ ಶಿಕ್ಷಣವನ್ನು ಸಹ ಮಾನವನ ಮೂಲಭೂತ ಹಕ್ಕು ಎಂದು ಗುರುತಿಸಲಾಗಿದೆ. ಶಿಕ್ಷಣ ಮಾನವನ ಮೂಲಭೂತ ಹಕ್ಕು ಎಂಬ ವಿಚಾರವನ್ನು ಯಾರು ಅಲ್ಲಗಳೆಯುವಂತಿಲ್ಲ. ನಮ್ಮ ಸಂವಿಧಾನದಲ್ಲಿ ಸಮಾನತೆಯ ದೃಷ್ಟಿಯಿಂದ ಸಾಮಾಜಿಕ ನ್ಯಾಯ ಒದಗಿಸಲು ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದೆ. ಅದೇ ರೀತಿ ಎಲ್ಲಾ ಸಮುದಾಯಗಳ ಶೈಕ್ಷಣಿಕಾಭಿವೃದ್ಧಿಗಾಗಿ ಹಲವಾರು

*Please cite this article as: ದೊಡ್ಡ ಹನುಮಯ್ಯ ಬಿ. ಎಚ್.* (2022). ಪರಿಶಿಷ್ಟ ಜಾತಿ ಮಹಿಳೆಯರ ಶೈಕ್ಷಣಿಕ ಸ್ಥಿತಿಗತಿಗಳು: ಸಮಾಜಶಾಸ್ತ್ರೀಯ ವಿಶ್ಲೇಷಣೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(4). ಪು.ಸಂ.* 136–143.

ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸಿದ್ದರೂ ಸಹಾ ಇಂದಿಗೂ ಮಕ್ಕಳಿಗೆ ಶಿಕ್ಷಣ ಒದಗಿಸುವಲ್ಲಿ ವಿಫಲರಾಗಿದ್ದೇವೆ. ನಗರದ ಕೊಳಚೆ ಪ್ರದೇಶ, ಗ್ರಾಮೀಣ ಪ್ರದೇಶ ಹಾಗೂ ಬುಡಕಟ್ಟು ಪ್ರದೇಶದ ಬಹುಪಾಲು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದು ವಿವಿಧ ರೀತಿಯ ಶೈಕ್ಷಣಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಜಿಲ್ಲೆ ಜಿಲ್ಲೆಗಳ ನಡುವೆ ಲಿಂಗ ಹಾಗೂ ವರ್ಗಗಳ ನಡುವೆ ಹಲವಾರು ವ್ಯತ್ಯಾಸಗಳಿರುವುದನ್ನು ಕಾಣಬಹುದಾಗಿದೆ. ಇಂತಹ ವ್ಯತ್ಯಾಸವನ್ನು ಹೋಗಲಾಡಿಸಲು ಸರ್ವರಿಗೂ ಶಿಕ್ಷಣವನ್ನು ನೀಡಿ ಸಮಾನತೆಯ ನ್ಯಾಯ ಒದಗಿಸುವ ನಿಟ್ಟಿನಲ್ಲಿ ವಿವಿಧ ಚಟುವಟಿಕೆಗಳು, ಚಿಂತನೆಗಳು ಮತ್ತು ಸಂಶೋಧನೆಗಳು ನಡೆಯಬೇಕಿರುವುದು ಅತ್ಯವಶ್ಯಕವಾಗಿದೆ.

**ಅಧ್ಯಯನದ ಉದ್ದೇಶಗಳು**

- ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಜನರ ಸಾಮಾಜಿಕ ಮತ್ತು ಆರ್ಥಿಕ ರೂಪುರೇಷೆಗಳನ್ನು ತಿಳಿದುಕೊಳ್ಳುವುದು.
- ಕರ್ನಾಟಕದಲ್ಲಿನ ಪರಿಶಿಷ್ಟ ಜಾತಿ ಮಹಿಳೆಯರ ಶೈಕ್ಷಣಿಕ ಸ್ಥಾನಮಾನವನ್ನು ತಿಳಿದುಕೊಳ್ಳುವುದು.
- ಪರಿಶಿಷ್ಟ ಜಾತಿ ಮಹಿಳೆಯರ ಶೈಕ್ಷಣಿಕ ಅಭಿವೃದ್ಧಿಗೆ ಸಲಹೆಗಳನ್ನು ನೀಡುವುದು.

**ಅಧ್ಯಯನದ ಮಹತ್ವ**

- ಪರಿಶಿಷ್ಟ ಜಾತಿ ಜನರ ಜೀವನದ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಒದಗಿಸುತ್ತದೆ.
- ಪರಿಶಿಷ್ಟ ಜಾತಿ ಜನರ ಶೈಕ್ಷಣಿಕ ಸ್ಥಿತಿಗತಿಗಳು ಮತ್ತು ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತ್ತದೆ.
- ಪರಿಶಿಷ್ಟರ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ನೀತಿ ನಿರೂಪಕರಿಗೆ ಮತ್ತು ಅಧಿಕಾರಿಗಳಿಗೆ ನೆರವಾಗುತ್ತದೆ.

**ಅಧ್ಯಯನ ವಿಧಾನಗಳು**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ (ಅನುಷಂಗಿಕ) ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಆದರೆ ಪ್ರಾಥಮಿಕ ಮಾಹಿತಿಗಿಂತ ಮಾಧ್ಯಮಿಕ ಮಾಹಿತಿಗೆ ಹೆಚ್ಚು ಒತ್ತುಕೊಡಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಹಭಾಗಿತ್ವ ಅವಲೋಕನ, ಸಂದರ್ಶನ, ಗುಂಪು ಚರ್ಚೆ, ಪ್ರಕರಣ ಅಧ್ಯಯನ ವಿಧಾನಗಳನ್ನು ಬಳಸಿಕೊಂಡು ಸಂಗ್ರಹಿಸಲಾಗಿದೆ. ಅನುಷಂಗಿಕ ಮಾಹಿತಿಯನ್ನು ಜನಗಣತಿ ವರದಿಗಳು, ಅಪ್ರಕಟಿತ ಸಂಶೋಧನಾ ಮಹಾಪ್ರಬಂಧಗಳು, ಸಮಾಜ ಕಲ್ಯಾಣ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ವರದಿಗಳು, ಗ್ರಂಥಗಳು, ಸಂಶೋಧನಾ ನಿಯತಕಾಲಿಕೆಗಳು ಮತ್ತು ಸಂಶೋಧನಾ ಜಾಲತಾಣದಿಂದ ಸಂಗ್ರಹಿಸಲಾಗಿದೆ.

**ಭಾರತದಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆ**

ಭಾರತೀಯ ಸಮಾಜದಲ್ಲಿ ಪರಿಶಿಷ್ಟ ಜಾತಿ ಜನರು (ಅಸ್ಪೃಶ್ಯರು) ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಧಾರ್ಮಿಕವಾಗಿ ಅತ್ಯಂತ ಹಿಂದುಳಿದಿದ್ದಾರೆ. ಪುರಾತನ ಕಾಲದಿಂದಲೂ

ಇವರನ್ನು ದೇವರು, ಧರ್ಮ, ಜಾತಿ ಶ್ರೇಷ್ಠತೆಯ ಹೆಸರಿನಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಲಭ್ಯಗಳಿಂದ ವಂಚಿಸಲಾಗಿತ್ತು. ಸಮಾಜದಲ್ಲಿ ಸಮಾನವಾದ ಪ್ರಾತಿನಿಧ್ಯತೆಯಿಲ್ಲದೆ ಪ್ರಾಣಿಗಳಿಗಿಂತಲೂ ಕಡೆಯಾಗಿ ಜೀವನ ಸಾಗಿಸುವಂತೆ ಮಾಡಲಾಗಿತ್ತು. ನಂತರ ಅಂದರೆ ಬ್ರಿಟಿಷ್ ಆಡಳಿತ ಮತ್ತು ಕ್ರೈಸ್ತ ಮಿಷನರಿಗಳು ದಲಿತ, ಹಿಂದುಳಿದ ಮತ್ತು ಮಹಿಳೆಯರಿಗೆ ಶಿಕ್ಷಣ ನೀಡಲು ಪ್ರಾರಂಭಿಸಿದವು. ಸ್ವಾತ್ರಂತ್ರ್ಯದ ನಂತರ ಡಾ. ಬಿ.ಆರ್. ಅಂಬೇಡ್ಕರ್‌ರವರ ಶ್ರಮದ ಪ್ರತಿಫಲವಾಗಿ ಸಂವಿಧಾನದಲ್ಲಿ ಸಮಾಜದ ಎಲ್ಲಾ ವರ್ಗಗಳಿಗೂ ಸಮಾನವಾದ ಹಕ್ಕುಗಳನ್ನು ನೀಡುವುದರ ಮುಖಾಂತರ ಸಮಾಜದ ಮುಖ್ಯವಾಹಿನಿಗೆ ತರಲು ಪ್ರಾರಂಭಿಸಿದರು. ಆದರೂ ಇಂದಿಗೂ ಕೂಡ ನಿರೀಕ್ಷಿತ ಪ್ರಮಾಣದಲ್ಲಿ ಧಮನಿತ ಸಮುದಾಯಗಳು ಅಭಿವೃದ್ಧಿ ಪಥದತ್ತ ಸಾಗದೆ ಸಮಾಜದಲ್ಲಿ ಹಿಂದುಳಿದಿರುವುದನ್ನು ಕಾಣಬಹುದಾಗಿದೆ.

2011 ನೇ ಜನಗಣತಿ ಪ್ರಕಾರ ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ.16.6 ರಷ್ಟಿರುವ ಪರಿಶಿಷ್ಟ ಜಾತಿ ಜನರು ದೇಶದ ಎಲ್ಲಾ ರಾಜ್ಯಗಳಲ್ಲೂ ನೆಲೆಸಿದ್ದಾರೆ. ದೇಶದಲ್ಲಿ ಒಟ್ಟು 1,241 ಪರಿಶಿಷ್ಟ ಜಾತಿ ಸಮುದಾಯಗಳಿವೆ. ಪರಿಶಿಷ್ಟ ಜಾತಿ ಜನರನ್ನು ಅಂತ್ಯಜರು, ಪಂಚಮರು, ಅನಾರ್ಯರು, ಅಂತ್ಯವಾಸಿಗಳು, ದಲಿತರು ಎಂಬುದಾಗಿ ಕರೆಯಲಾಗುತ್ತದೆ. ಭಾರತೀಯ  ಸಂವಿಧಾನದ 341 ನೇ ಪರಿಚ್ಛೇದದ ಪ್ರಕಾರ ಇವರನ್ನು "ಪರಿಶಿಷ್ಟ ಜಾತಿಗಳು" ಎಂದು ಕರೆಯಲಾಗಿದೆ. (ಶೈಲಜ ಕೆ, 2016).

ಪರಿಶಿಷ್ಟ ಜಾತಿ ಸಮುದಾಯದ ಸಾಕ್ಷರತೆಯು ಶೇ.66.1 ರಷ್ಟಿದ್ದು, ಹಿಂದಿನ ದಶಕಕ್ಕೆ ಹೋಲಿಸಿದರೆ ಶೇ.11.4 ರಷ್ಟು ಸಾಕ್ಷರತ ಪ್ರಮಾಣ ಅಧಿಕವಾಗಿದೆ. ಪ್ರದೇಶವಾರು ನೋಡಿದಾಗ ಗ್ರಾಮೀಣ ಪ್ರದೇಶದ ಸಾಕ್ಷರತ ಪ್ರಮಾಣ (ಶೇ.62.8) ಕ್ಕಿಂತ ನಗರ ಪ್ರದೇಶದ ಸಾಕ್ಷರತ ಪ್ರಮಾಣ (ಶೇ.76.2) ಲಿಂಗಕ್ಕನುಗುಣವಾಗಿ ಪ್ರದೇಶವಾರು ಸಾಕ್ಷರತ ಪ್ರಮಾಣವನ್ನು ಗಮನಿಸಿದರೆ ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಕೂಡ ಮಹಿಳಾ ಸಾಕ್ಷರತ ಪ್ರಮಾಣಕ್ಕಿಂತ ಪುರುಷ ಸಾಕ್ಷರತಾ ಪ್ರಮಾಣ ಅಧಿಕವಾಗಿದೆ. ಶಿಕ್ಷಣವು ಅಭಿವೃದ್ಧಿ ಸೂಚಕವಾಗಿದೆ. ಆದರೆ ಇಂದಿಗೂ ಕೂಡ ಮಹಿಳೆಯರು ಅದರಲ್ಲೂ ಗ್ರಾಮೀಣ ಪ್ರದೇಶದ ಮಹಿಳೆಯರು ಶೈಕ್ಷಣ ಿಕವಾಗಿ ಹಿಂದುಳಿದಿರುವುದ್ದರಿಂದ ಅವರ ಸಾಮಾಜಿಕ ಹಾಗೂ ಆರ್ಥಿಕ ಮಟ್ಟ ತುಂಬಾ ಕೆಳಮಟ್ಟದಲ್ಲಿದೆ. ಅದರಲ್ಲೂ ಪರಿಶಿಷ್ಟ ಜಾತಿ ಮಹಿಳೆಯರು ಅಸಂಘಟಿತ, ಕೌಶಲ್ಯ ರಹಿತ, ಕಡಿಮೆ ವೇತನ ದೊರೆಯುವಂತಹ ಉದ್ಯೋಗಗಳಲ್ಲಿ ವಿಶೇಷವಾಗಿ ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವುದನ್ನು ಕಾಣಬಹುದಾಗಿದೆ.

**ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆ**

ಕರ್ನಾಟಕದಲ್ಲಿ ಹೊಲೆಯ, ಮಾದಿಗ, ಛಲವಾದಿ, ಡೋರ, ಸಮಗಾರ, ಮಹರ್, ಚಮ್ಮಾರ, ಆದಿಕರ್ನಾಟಕ, ಆದಿಜಾಂಬವ, ಆದಿದ್ರಾವಿಡ, ಲಂಬಾಣಿ, ಬೋವಿ, ಭಂಗಿ, ಬಲಗೈ, ಕೊರಚ, ಕೊರಮ ಮುಂತಾದ ಸಮುದಾಯಗಳನ್ನೊಳಗೊಂಡಂತೆ ಒಟ್ಟು 101 ಸಮುದಾಯಗಳನ್ನು ಸಂವಿಧಾನದತ್ತವಾಗಿ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಕಂಡು ಬರುತ್ತಾರೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.17.55 ರಷ್ಟು ಅಂದರೆ 1.04,74,992 ಜನರು ಪರಿಶಿಷ್ಟ ಜಾತಿಗೆ ಸೇರಿದ ಜನರಿದ್ದಾರೆ. ಲಿಂಗವಾರು ನೊಡಿದರೆ ಶೇ.50.25 ರಷ್ಟು ಪುರುಷರು ಮತ್ತು ಶೇ.49.75 ಮಹಿಳೆಯರಿದ್ದು, ಹೆಚ್ಚು ಕಡಿಮೆ ಸಮ ಪ್ರಮಾಣದಲ್ಲಿದ್ದಾರೆ.

ಪ್ರದೇಶವಾರು ನೋಡಿದಾಗ ಶೇ.71.55 ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿಯೂ ಹಾಗೂ ಶೇ.28.45 ರಷ್ಟು ಜನರು ನಗರ ಪ್ರದೇಶಗಳಲ್ಲಿಯೂ ನೆಲೆಸಿದ್ದಾರೆ.

**ಮಾಹಿತಿ ವಿಶ್ಲೇಷಣೆ**


ಶಿಕ್ಷಣವು ಯಾವುದೇ ಒಂದು ಸಮುದಾಯದ ಅಭಿವೃದ್ಧಿಯ ಸೂಚಕವೆಂದರೆ ತಪ್ಪಾಗಲಾರದು. ಆದರೆ ರಾಷ್ಟ್ರ ಮತ್ತು ರಾಜ್ಯ ಎರಡೂ ಕಡೆಯೂ ಕೂಡ ಪರಿಶಿಷ್ಟ ಮಹಿಳೆಯರ ಸಾಕ್ಷರತೆ ಪ್ರಮಾಣ ಅತ್ಯಂತ ಕಡಿಮೆಯಿರುವುದನ್ನು ಕಾಣಬಬಹುದಾಗಿದೆ. ಸಾಮಾನ್ಯ ಸಮುದಾಯದ ಮಹಿಳೆಯರಿಗಿಂತಲೂ ಕೂಡ ಪರಿಶಿಷ್ಟ ಸಮುದಾಯಗಳ ಸಾಕ್ಷರತೆ ಕಡಿಮೆಯಿರುವುದನ್ನು ಗಮನಿಸಬಹುದಾಗಿದೆ.

**ಕೋಷ್ಟಕ 1: ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮಹಿಳೆಯರ ಸಾಕ್ಷರತ ಪ್ರಮಾಣ**

| ವಿವರ | ಗಂಡು | | ಹೆಣ್ಣು | | ಒಟ್ಟು | |
|---|---|---|---|---|---|---|
| | ಆವೃತ್ತಿ | ಶೇ. | ಆವೃತ್ತಿ | ಶೇ. | ಆವೃತ್ತಿ | ಶೇ. |
| ಅನಕ್ಷರಸ್ಥರು | 1879672 | 35.7 | 2639555 | 50.7 | 4519227 | 43.1 |
| ಅಕ್ಷರಸ್ಥರು | 3384873 | 64.3 | 2570892 | 49.3 | 5955765 | 56.9 |
| ಒಟ್ಟು | 5264545 | 100.0 | 5210447 | 100.0 | 10474992 | 100.0 |

*ಮೂಲ: ಜನಗಣತಿ ವರದಿ–2011*

**ಗ್ರಾಫ್ 1 : ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮಹಿಳೆಯರ ಸಾಕ್ಷರತ ಪ್ರಮಾಣ**




ಕೋಷ್ಟಕ 1 ರಲ್ಲಿ ಲಿಂಗವಾರು ಪರಿಶಿಷ್ಟ ಜಾತಿ ಜನರ ಸಾಕ್ಷರತ ಪ್ರಮಾಣವನ್ನು ನೀಡಲಾಗಿದೆ. ರಾಜ್ಯದಲ್ಲಿ ಪರಿಶಿಷ್ಟ ಜಾತಿ ಸಮುದಾಯದ ಸಾಕ್ಷರತೆ ಶೇ.56.9 ರಷ್ಟಿದ್ದು, ರಾಜ್ಯದ ಒಟ್ಟು ಸಾಕ್ಷರತೆಗೆ ಹೋಲಿಸಿದರೆ ಶೇ.18.5 ರಷ್ಟು ಕಡಿಮೆಯಿದೆ. ಲಿಂಗವಾರು ನೋಡಿದರೆ ಪುರುಷರ ಸಾಕ್ಷರತ ಪ್ರಮಾಣ ಶೇ.64.3 ರಷ್ಟಿದ್ದು, ಮಹಿಳೆಯರ ಸಾಕ್ಷರತ ಪ್ರಮಾಣ ಶೇ.49.3 ರಷ್ಟಿದೆ. ಪ್ರದೇಶವಾರು ನೋಡಿದಾಗ ಗ್ರಾಮೀಣ ಪ್ರದೇಶದ ಸಾಕ್ಷರತೆ ಶೇ.52.35 ರಷ್ಟಿದ್ದು ರಾಜ್ಯದ ಪರಿಶಿಷ್ಟ ಜಾತಿ ಸರಾಸರಿ ಸಾಕ್ಷರತೆಗಿಂತಲೂ ಶೇ.4.5 ರಷ್ಟು ಕಡಿಮೆಯಿದೆ. ಆದರೆ ನಗರ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಜನರ ಸಾಕ್ಷರತೆ ಶೇ.68.18 ರಷ್ಟಿದ್ದು ಸುಧಾರಣೆ ಕಂಡಿದೆ. ಗ್ರಾಮೀಣ ಹಾಗೂ ನಗರ ಪ್ರದೇಶಗಳೆರಡರಲ್ಲೂ ಕೂಡ ಮಹಿಳೆಯರ ಸಾಕ್ಷರತ ಪ್ರಮಾಣ ಪುರುಷರಿಗಿಂತ ಕಡಿಮೆಯಿದೆ.

**ಕೋಷ್ಟಕ: 2 ಕರ್ನಾಟಕದ ಪರಿಶಿಷ್ಟ ಜಾತಿ ಜನರ ಶೈಕ್ಷಣಿಕ ಸ್ಥಿತಿಗತಿಗಳು**

| ವಿವರ | ಗಂಡು | | ಹೆಣ್ಣು | | ಒಟ್ಟು | |
|---|---|---|---|---|---|---|
| | ಆವೃತ್ತಿ | ಶೇ. | ಆವೃತ್ತಿ | ಶೇ. | ಆವೃತ್ತಿ | ಶೇ. |
| ಅನಕ್ಷರಸ್ಥರು | 1879672 | 35.7 | 2639555 | 50.7 | 4519227 | 43.1 |
| ಯಾವುದೇ ಶಿಕ್ಷಣವಿಲ್ಲದ ಅಕ್ಷರಸ್ಥರು | 193163 | 3.7 | 159451 | 3.1 | 352614 | 3.4 |
| ಪ್ರಾಥಮಿಕ ಶಿಕ್ಷಣಕ್ಕಿಂತ ಕಡಿಮೆ | 656345 | 12.5 | 565773 | 10.9 | 1222118 | 11.7 |
| ಪ್ರಾಥಮಿಕ ಶಿಕ್ಷಣ | 830292 | 15.8 | 697945 | 13.4 | 1528237 | 14.6 |
| ಮಾಧ್ಯಮಿಕ ಶಿಕ್ಷಣ | 508050 | 9.7 | 383376 | 7.4 | 891426 | 8.5 |
| ಪ್ರೌಢ ಶಿಕ್ಷಣ | 381383 | 7.2 | 289983 | 5.6 | 671366 | 6.4 |
| ಪದವಿಪೂರ್ವ ಶಿಕ್ಷಣ | 487919 | 9.3 | 324560 | 6.2 | 812479 | 7.8 |
| ತಾಂತ್ರಿಕೇತರ ಡಿಪ್ಲೋಮ/ಸರ್ಟಿಫಿಕೇಟ್ ಕೋರ್ಸ್ | 12532 | 0.2 | 4152 | 0.1 | 16684 | 0.2 |
| ತಾಂತ್ರಿಕೇತರ ಡಿಪ್ಲೋಮ/ಸರ್ಟಿಫಿಕೇಟ್ ಕೋರ್ಸ್ | 63548 | 1.2 | 23036 | 0.4 | 86584 | 0.8 |
| ಪದವಿ ಮತ್ತು ಪದವಿ ಮೇಲ್ಪಟ್ಟು | 239585 | 4.6 | 111205 | 2.1 | 350790 | 3.3 |
| ಇತರೆ | 12056 | 0.2 | 11411 | 0.2 | 23467 | 0.2 |
| ಒಟ್ಟು | 5264545 | 100.0 | 5210447 | 100.0 | 10474992 | 100.0 |

***ಮೂಲ: ಜನಗಣತಿ ವರದಿ–2011***

**ಗ್ರಾಫ್ 2: ಕರ್ನಾಟಕದ ಪರಿಶಿಷ್ಟ ಜಾತಿ ಜನರ ಶೈಕ್ಷಣಿಕ ಸ್ಥಿತಿಗತಿಗಳು**




ಕೋಷ್ಟಕ 2 ರಲ್ಲಿ ಕರ್ನಾಟದಲ್ಲಿ ನೆಲೆಸಿರುವ ಪರಿಶಿಷ್ಟ ಜಾತಿ ಸಮುದಾಯದ ಶೈಕ್ಷಣಿಕ ಸ್ಥಾನಮಾನಗಳನ್ನು ನೀಡಲಾಗಿದೆ. ಮೊದಲೇ ಹೇಳಿದ ಹಾಗೇ ರಾಜ್ಯದ ಸರಾಸರಿಗೆ ಹೋಲಿಸಿದಾಗ ಪರಿಶಿಷ್ಟ ಜಾತಿ ಸಮುದಾಯಗಳ ಸಾಕ್ಷರತೆ ಮತ್ತು ಶೈಕ್ಷಣಿಕ ಮಟ್ಟ ಕಡಿಮೆಯಿದೆ. ಅದರಲ್ಲಿಯೂ ಪರಿಶಿಷ್ಟ ಮಹಿಳೆಯರ ಸಾಕ್ಷರತೆ ಮತ್ತು ಶೈಕ್ಷಣಿಕ ಮಟ್ಟ ಕೆಳ ಹಂತದಲ್ಲಿದೆ. ಕೋಷ್ಟಕ 2ರಲ್ಲಿ ತೋರಿಸಿರುವಂತೆ ಅತ್ಯಂತ ಹೆಚ್ಚಿನ ಅಂದರೆ ಶೇ. 14.6 ರಷ್ಟು ಜನರು ಪ್ರಾಥಮಿಕ ಶಿಕ್ಷಣವನ್ನು ಮಾತ್ರ ಪಡೆದಿದ್ದಾರೆ. ಲಿಂಗವಾರು ನೋಡಿದಾಗ ಪುರುಷರ ಶೈಕ್ಷಣಿಕ ಮಟ್ಟಕ್ಕೆ ಹೋಲಿಸಿದಾಗ ಮಹಿಳೆಯರ ಶೈಕ್ಷಣಿಕ ಮಟ್ಟ ಕಡಿಮೆಯಿರುವುದನ್ನು ಕಾಣಬಹುದಾಗಿದೆ. ಶೇ.50ಕ್ಕಿಂತ ಹೆಚ್ಚಿನ ಮಹಿಳೆಯರು ಅನಕ್ಷರಸ್ಥರಾಗಿದ್ದು, ಇನ್ನುಳಿದಂತೆ ಶೇ.10.9 ರಷ್ಟು ಪ್ರಾಥಮಿಕ ಹಂತಕ್ಕಿಂಗ ಕಡಿಮೆ, ಶೇ13.4ರಷ್ಟು ಪ್ರಾಥಮಿಕ, ಶೇ.7.4 ರಷ್ಟು ಮಾಧ್ಯಮಿಕ ಶಿಕ್ಷಣವನ್ನು ಪಡೆದಿದ್ದಾರೆ ಹಾಗೂ ಶೇ.5.6 ರಷ್ಟು ಪ್ರೌಢ, ಶೇ.6.2 ಪದವಿಪೂರ್ವ ಶಿಕ್ಷಣ, ಶೇ.0.1 ರಷ್ಟು ತಾಂತ್ರಿಕೇತರ ಡಿಪ್ಲೋಮ/ಸರ್ಟಿಫಿಕೇಟ್ ಕೋರ್ಸ್, ಶೇ0.1ರಷ್ಟು ತಾಂತ್ರಿಕ ಡಿಪ್ಲೋಮ, ಹಾಗೂ ಶೇ.2.1 ರಷ್ಟು ಪದವಿ ಮತ್ತು ಪದವಿ ಮೇಲ್ಪಟ್ಟ ಶಿಕ್ಷಣವನ್ನು ಪಡೆದಿದ್ದಾರೆ. ಎಲ್ಲಾ ಹಂತಗಳಲ್ಲಿಯೂ ಕೂಡ ಮಹಿಳೆಯರ ಶೈಕ್ಷಣಿಕ ಸ್ಥಾನಮಾನ ಪುರುಷರಿಗಿಂತ ಕಡಿಮೆಯಿರುವುದನ್ನು ನೋಡಬಹುದಾಗಿದೆ.

ಕೋಷ್ಟಕ ಎರಡನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಕಡಿಮೆ ಹಂತದಿಂದ ಹೆಚ್ಚಿನ ಹಂತದ ಶಿಕ್ಷಣದೆಡೆಗೆ ಹೋದಂತೆ ಪುರುಷ–ಮಹಿಳೆ ಎಂಬ ಬೇಧವಿಲ್ಲ ಪರಿಶಿಷ್ಟ ಜಾತಿಯಲ್ಲಿ ಓದುವವರ ಪ್ರಮಾಣ

ಕಡಿಮೆಯಾಗಿರುವುದನ್ನು ಕಾಣಬಹುದಾಗಿದೆ. ಅಂದರೆ ಶೈಕ್ಷಣಿಕ ಹಂತ ಹೆಚ್ಚಿದಂತೆಲ್ಲ ಶಾಲೆ ತೊರೆಯುವವರ ಪ್ರಮಾಣ ಹೆಚ್ಚಿರುವುದನ್ನು ಈ ಅಂಶದಿಂದ ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ.

ಪರಿಶಿಷ್ಟ ಜಾತಿ ಮಕ್ಕಳು ಅದರಲ್ಲೂ ಹೆಣ್ಣು ಮಕ್ಕಳು ವಿವಿಧ ಕಾರಣಗಳಿಂದ ಶಾಲೆ ತೊರೆಯುವುದು, ಶಾಲೆಗೆ ಗೈರುಹಾಜರಾಗುವುದು ಇಂದಿಗೂ ನಿಂತಿಲ್ಲ. ಮೂಲತಃ ಕಡುಬಡತನದಲ್ಲಿರುವ ಬಹುತೇಕ ಸಣ್ಣ–ಸಣ್ಣ ಅಂದರೆ ಶಿಳ್ಳೇಕ್ಯಾತ ಸುಡುಗಾಡು ಸಿದ್ಧದಂತಹ ಸಮುದಾಯಗಳಲ್ಲಿ ಶಾಲೆಯ ಮುಖವನ್ನೇ ನೋಡದ ಮಕ್ಕಳೂ ಇಂದಿಗೂ ಇರುವುದನ್ನು ಕಾಣಬಹುದಾಗಿದೆ. ಬಡತನ, ಓದಿನಲ್ಲಿ ನಿರಾಸಕ್ತಿ, ಸರಿಯಾದ ಮಾರ್ಗದರ್ಶನದ ಕೊರತೆ, ಅನಾರೋಗ್ಯ, ಜಾತಿ ತಾರತಮ್ಯ, ಪೋಷಕರ ವಲಸೆ, ಬಾಲ್ಯ ವಿವಾಹ, ಅಲೆಮಾರಿತನ ಮುಂತಾದ ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ಇವರ ಶಿಕ್ಷಣದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತಿದೆ. ಆದರೆ ಸ್ವಾತಂತ್ರ್ಯೋತ್ತರ ಕಾಲಘಟ್ಟಕ್ಕೆ ಹೋಲಿಸಿರೆ ಪರಿಶಿಷ್ಟ ಜನರ ಶೈಕ್ಷಣಿಕ ಅಲ್ಪ ಪ್ರಮಾಣದಲ್ಲಾದರೂ ಸುಧಾರಿಸಿದೆ ಎಂದರೆ ತಪ್ಪಾಗಲಾರದು.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ಪರಿಶಿಷ್ಟ ಜಾತಿ ಮತ್ತು ಆ ಸಮುದಾಯದ ಮಹಿಳೆಯರ ಶೈಕ್ಷಣಿಕ ಸ್ಥಾನಮಾನ ಕಡಿಮೆಯಿರುವುದನ್ನು ಮೇಲಿನ ಅಂಶಗಳಿಂದ ಸ್ಪಷ್ಟೀಕರಿಸಿಕೊಳ್ಳಬಹುದಾಗಿದೆ. ಪರಿಶಿಷ್ಟರ ಶೈಕ್ಷಣಿಕಾಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂವಿಧಾನಾತ್ಮಕವಾಗಿ ಹಲವಾರು ಸವಲತ್ತುಗಳನ್ನು ನೀಡುತ್ತಿದ್ದರೂ ಕೂಡ ಅವು ಪ್ರಾಮಾಣಿಕ ಅನುಷ್ಠಾನದ ಕೊರತೆಯಿಂದಾಗಿ ಹಾಗೂ ಪರಿಣಾಮಕಾರಿಯಾಗಿ ಸಮುದಾಯಗಳು ಬಳಸಿಕೊಳ್ಳುವಲ್ಲಿ ಸೋತಿರುವುದ್ದರಿಂದ ಪರಿಶಿಷ್ಟ ಮಹಿಳೆಯರು ಶೈಕ್ಷಣಿಕ ಕ್ಷೇತ್ರವನ್ನೊಳಗೊಂಡಂತೆ ಎಲ್ಲಾ ರಂಗಗಳಲ್ಲಿಯೂ ಹಿಂದುಳಿದಿದ್ದಾರೆ. ಶಿಕ್ಷಣ ಮತ್ತು ಸರ್ಕಾರದಿಂದ ನೀಡುವ ಸವಲತ್ತುಗಳ ಬಗೆಗಿನ ಅರಿವಿಲ್ಲದಿರುವುದು ಪ್ರಮುಖ ಕಾರಣವಾಗಿದ್ದು, ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳು ಅರಿವು ಮೂಡಿಸಬೇಕಿರುವುದು ಅಗತ್ಯವಾಗಿದೆ. ಅಲ್ಲದೇ ಹೆಣ್ಣುಮಕ್ಕಳ ಶೈಕ್ಷಣಿಕಾಭಿವೃದ್ಧಿಗೆ ವಿಶೇಷ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು, ವಿದ್ಯಾರ್ಥಿ ವೇತನ ಹೆಚ್ಚಳ, ಪೋಷಕರಿಗೆ ಪ್ರೋತ್ಸಾಹ ಧನ ನೀಡುವುದು, ಹೆಣ್ಣು ಮಕ್ಕಳಿಗೆ ಸಂಪೂರ್ಣ ಉಚಿತ ಶಿಕ್ಷಣ ನೀಡುವುದು, ಆಧುನಿಕತೆಗೆ ಅನುಗುಣವಾಗಿ ಅಗತ್ಯವಿರು ಪಾಠೋಪಕರಣಗಳನ್ನು ಒದಗಿಸುವುದು, ವಿದ್ಯಾವಂತ ಹೆಣ್ಣು ಮಕ್ಕಳನ್ನು ಗುರುತಿಸಿ ಅವರಿಗೆ ಉದ್ಯೋಗ ಕಲ್ಪಿಸುವುದು ಅಗತ್ಯವಾಗಿದೆ. ಈ ಕಾರ್ಯಕ್ರಮಗಳ ಜೊತೆಗೆ ಈಗಿರುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದರೆ ಪರಿಶಿಷ್ಟ ಜಾತಿ ಮಹಿಳೆಯರರನ್ನು ಶೈಕ್ಷಣಿಕವಾಗಿ ಸುಧಾರಿಸುವುದರ ಮುಖೇನ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲೀಕರಣಗೊಳಿಸಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಮಂಜುನಾಥ (2014). ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳು: ಒಂದು ಮಾನವಶಾಸ್ತ್ರೀಯ ಅಧ್ಯಯನ, ಮೈಸೂರು ವಿವಿ, ಮೈಸೂರು.

- ಶೈಲಜ ಕೆ (2016). ಪರಿಶಿಷ್ಟ ಜಾತಿ ಮಹಿಳಾ ಕೃಷಿ ಕಾರ್ಮಿಕರ ಸ್ಥಿತಿಗತಿಗಳು : ಒಂದು ಮಾನವಶಾಸ್ತ್ರೀಯ ಅಧ್ಯಯನ, ಅಪ್ರಕಟಿತ ಪ್ರೌಢ ಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- Basu, D. D. (2012). Introduction to the constitution of India. Gurgaon, India: Lexis Nexis Butterworths Wadhwa.
- Bhuimali, A. (2007). Development of Schedule Caste. New Delhi: Serials Publications.
- Census Report (2011). Primary census abstract: Census of India. New Delhi, India: Office of the Registrar General & Census Commissioner, Govt of India.
- Chandidas, R. (1969). How Close to Equality Are Scheduled Castes? Economic and Political Weekly, 4(24): 975-979.
- Chatterjee, S. K. (1996). The Scheduled Caste in India. Vol.IV. Gyan Publishing House New Delh.
- Chauhan, B. R. (1975). Scheduled Castes and Education. Meerut: Annu Publication. New Delhi.
- Harihar Sahoo & Sumana Acharya (2019). Education among Scheduled Caste Population in India, The Indonesian journal of geography 51(3):393 DOI:10.22146/ijg.43192
- Nair, P.R.G., (1976). Education and Socio-Economic Changes in Kerala. 1793-1947, Social Scientist 4 (8): p.28-43.
- NCSC (n.d.). Ecoomic development of Scheduled Caste. Retrieved April 05, 2018, from National commission for Scheduled Caste: http://ncsc.nic.in/files/ncsc/new3/202.pdf
- Times of India (2014). Half of school dropouts in Karnataka are Dalits. Times of India, Bangalore, India.